40

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01

ಸಂಖ್ಯೆ–ಸಿ1(4)ಪ್ರ.ನಿ.ಬ: 82/2010–11 ದಿನಾಂಕ: 21-02-2012

## ಸುತ್ತೋಲೆ

ವಿಷಯ:–ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರೌಢ ಶಾಲಾ ವಿಭಾಗದ ಉಪ ಪ್ರಾಂಶುಪಾಲರ ಹುದ್ದೆ ತೆರವಾದಾಗ ಪ್ರಭಾರವನ್ನು ನೀಡುವ ಬಗ್ಗೆ.

ಉಲ್ಲೇಖ:–1.ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸಿ1(1) ಪ್ರಭಾರ.ಇತರೆ:13/2002–03 (ಭಾಗ–2) ದಿನಾಂಕ: 27.12.2002

2.ಸರ್ಕಾರದ ಆದೇಶ ಸಂಖ್ಯೆ: ಇಡಿ 251 ಎಸ್ ಒ ಹೆಚ್ 2009, ದಿನಾಂಕ: 22.01.2010

3.ಈ ಕಛೇರಿಯ ಸುತ್ತೋಲೆ ಸಮ ಸಂಖ್ಯೆ ದಿನಾಂಕ:20.01.2011.

4.ಈ ಕಛೇರಿಯ ಪತ್ರ/ಹಿಂಬರಹ ಸಮ ಸಂಖ್ಯೆ ದಿನಾಂಕ:04.07.2011 21.12.2011

– ****** –

ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರೌಢ ಶಾಲಾ ವಿಭಾಗದ ಉಪ ಪ್ರಾಂಶುಪಾಲರ ಹುದ್ದೆ ಕಾರಣಾಂತರ (ಬಡ್ತಿ, ವರ್ಗಾವಣೆ, ನಿವೃತ್ತಿ, ಅಮಾನತ್ತು, ನಿಧನ)ದಿಂದ ತೆರವಾದಾಗ ಆಡಳಿತಾತ್ಮಕ ದೃಷ್ಟಿಯಿಂದ ಕರ್ನಾಟಕ ನಾಗರೀಕ ಸೇವಾ ನಿಯಮ 68ರ ಅಡಿಯಲ್ಲಿ ನಿಯಮಾನುಸಾರ ಪ್ರಭಾರ ವ್ಯವಸ್ಥೆ ಮಾಡಬೇಕಾಗಿರುವುದು ಕ್ರಮವಾಗಿದೆ.

ಇಂತಹ ಹೆಚ್ಚುವರಿ ಪ್ರಭಾರ ವ್ಯವಸ್ಥೆ ಮಾಡುವಾಗ ಕರ್ನಾಟಕ ಸರ್ಕಾರಿ ಸೇವಾ ನಿಯಮ 32ರ ಟಿಪ್ಪಣಿಯಂತೆ, ಸರ್ಕಾರಿ ನೌಕರನು ಖಾಲಿ ಇರುವ ಹುದ್ದೆಯ ಪ್ರಸಕ್ತ ಕರ್ತವ್ಯಗಳ ಪ್ರಭಾರವನ್ನು ನೋಡಿಕೊಳ್ಳುವಂತೆ ನೇಮಕ ಮಾಡಬೇಕಾದರೆ, ಆತನು ಆ ಹುದ್ದೆಗೆ ಅನ್ವಯಿಸುವ ವೃಂದ ಮತ್ತು ನೇಮಕಾತಿ ನಿಯಮಗಳಿಗನುಸಾರವಾಗಿ ಆ ಹುದ್ದೆಯಲ್ಲಿ ಸ್ಥಾನಪನ್ನನಾಗಿ ಪದೋನ್ನತಿ ಪಡೆಯುವುದಕ್ಕೆ ಅರ್ಹನಾಗಿರಬೇಕು ನಿಯಮ 68ರ ಟಿಪ್ಪಣಿಯಂತೆ ಒಬ್ಬ ಸರ್ಕಾರಿ ನೌಕರನು ತತ್ಸಮಾನ ಅಥವಾ ಅದಕ್ಕಿಂತ ಉನ್ನತ ಹುದ್ದೆಯನ್ನು ಹೊಂದಿದ್ದರೆ ಅಥವಾ ಅಂತಹ ಸರ್ಕಾರಿ ನೌಕರನು ಕೂಡಲೇ ಲಭ್ಯವಿದ್ದರೆ, ಅದೇ ಕಛೇರಿಯ ಒಬ್ಬ ನೌಕರನು ಪ್ರಭಾರವನ್ನು ನೀಡಲಿರುವ ಸರ್ಕಾರಿ ನೌಕರನ ನಿಕಟವರ್ತಿ ಕಿರಿಯ ಸರ್ಕಾರಿ ನೌಕರನಿದ್ದು, (Immediately junior to the Government servant) ಪ್ರಕರಣಕ್ಕನುಸಾರವಾಗಿ, ಪ್ರೊಬೇಷನ್ ಅಥವಾ ಅಫೀಶಿಯೇಷನ್, ಅವಧಿಯನ್ನು ಪೂರೈಸಿದ್ದಲ್ಲಿ, ನಿಯಮಗಳಡಿಯಲ್ಲಿ ಅಂತಹ ಸರ್ಕಾರಿ ನೌಕರನನ್ನು ತನ್ನ ಕರ್ತವ್ಯಗಳ ಜೊತೆಗೆ ಇನ್ನೊಂದು ಕಛೇರಿಯ ಅಥವಾ ಹುದ್ದೆಯ ಪ್ರಭಾರದಲ್ಲಿ ಚಾಲ್ತಿ ಕರ್ತವ್ಯಗಳನ್ನು ನಿರ್ವಹಿಸಲು ನೇಮಕಾತಿ ಮಾಡಬಹುದು ಎಂದಿರುತ್ತದೆ.

ಇದರಂತೆ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆ ಕಾರಣಾಂತರದಿಂದ ತೆರವಾದಾಗ ಅದೇ ಸಂಸ್ಥೆಯ ಹಿರಿಯ ಶಿಕ್ಷಕರಿಗೆ ತಾತ್ಕಾಲಿಕ ಹೆಚ್ಚುವರಿ ಪ್ರಭಾರ ವಹಿಸಿಕೊಡುವುದು. ಇಂತಹ ವ್ಯವಸ್ಥೆಗೆ ಕ್ಷೇತ್ರ ಶಿಕ್ಷಣಾಧಿಕಾರಿಯಿಂದ ಅನುಮೋದನೆ ಪಡೆದುಕೊಳ್ಳುವುದು. ಎಂದು ಉಲ್ಲೇಖ–1ರಲ್ಲಿ ಈಗಾಗಲೇ ದಿನಾಂಕ:27.12.2012ರಂದು ಸುತ್ತೋಲೆ ಹೊರಡಿಸಲಾಗಿದೆ.

ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರೌಢ ಶಾಲಾ ವಿಭಾಗದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ಪೂರ್ಣ ಅಧಿಕಾರವನ್ನು ಉಪಪ್ರಾಂಶುಪಾಲರಿಗೆ ಮತ್ತು ಉಪ ಉಪಪ್ರಾಂಶುಪಾಲರ ಹುದ್ದೆ ಇಲ್ಲದಿರುವ ಕಡೆ ಪ್ರೌಢ ಶಾಲೆಯ ಹಿರಿಯ ಸಹ ಶಿಕ್ಷಕರಿಗೆ ವಹಿಸಿ ಉಲ್ಲೇಖ–2ರಲ್ಲಿ ದಿನಾಂಕ:22.01.2010ರಲ್ಲಿ ಆದೇಶಿಸಲಾಗಿದೆ.

kpeta.weebly.com

Scanned by CamScanner

ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಮತ್ತು ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳ ಪ್ರೌಢ ಶಾಲಾ ವಿಭಾಗದ ಉಪ ಪ್ರಾಂಶುಪಾಲರು ಯಾವುದೇ ತರಹದ ರಜೆಯ ಮೇಲೆ ಹೋಗುವಾಗ ಪ್ರಭಾರವನ್ನು ಆಯಾ ಪ್ರೌಢ ಶಾಲೆಯ ಹಿರಿಯ ಸಹ ಶಿಕ್ಷಕರಿಗೆ ನಿಯಮಾನುಸಾರ ವಹಿಸುವಂತೆ ಉಲ್ಲೇಖ-3ರ ದಿನಾಂಕ: 20.01.2011ರ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರೌಢ ಶಾಲಾ ವಿಭಾಗದ ಉಪ ಪ್ರಾಂಶುಪಾಲರ ಹುದ್ದೆ ಕಾರಣಾಂತರದಿಂದ ತೆರವಾದಾಗ ಪ್ರಭಾರವನ್ನು ಪ್ರೌಢ ಶಾಲೆಗಳಲ್ಲಿನ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರಿಗೆ ವಹಿಸುವಂತೆ ಕೋರಿರುವ ದೈಹಿಕ ಶಿಕ್ಷಣ ಸಂಘಗಳ ಮನವಿಯನ್ನು ಪರಿಶೀಲಿಸಿ, ಈ ಮುಂದಿನಂತೆ ಹಿಂಬರಹ ನೀಡಲಾಗಿದೆ. ಸರ್ಕಾರಿ ಪ್ರೌಢ ಶಾಲೆಗಳಲ್ಲಿನ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರ ವೃಂದ ಮತ್ತು ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ವೃಂದ ಬೇರೆ ಬೇರೆ ಆಗಿರುವುದರಿಂದ, ಕಾರಣಾಂತರದಿಂದ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆ ತೆರವಾದಾಗ ಪ್ರಭಾರವನ್ನು ಪ್ರೌಢ ಶಾಲೆಗಳಲ್ಲಿನ ಹಿರಿಯ ದೈಹಿಕ ಶಿಕ್ಷಣ ಶಿಕ್ಷಕರಿಗೆ ವಹಿಸಲು ಸಧ್ಯ ನಿಯಮಗಳಲ್ಲಿ ಅವಕಾಶ ಇರುವುದಿಲ್ಲವೆಂದು ದೈಹಿಕ ಶಿಕ್ಷಣ ಸಂಘಗಳಿಗೆ ಉಲ್ಲೇಖ-4ರ ದಿನಾಂಕ: 21.12.2011ರ ಹಿಂಬರಹದಲ್ಲಿ ತಿಳಿಸಲಾಗಿದೆ.

ಸೈದ್ಧಾಂತಿಕವಾಗಿ ದೈಹಿಕ ಶಿಕ್ಷಕರಿಗೂ ಕೂಡ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆ ಬಡ್ತಿಗೆ ಅರ್ಹರೆಂದು ಪರಿಗಣಿಸಬೇಕಾಗಿ ವೈದ್ಯನಾಥನ್ ಸಮಿತಿಯ ಶಿಫಾರಸ್ಸನ್ನು ಸರ್ಕಾರ ಒಪ್ಪಿ ಕರಡು ವೃಂದ ಮತ್ತು ನೇಮಕಾತಿ ನಿಯಮಗಳು ಪ್ರಕಟಣೆ ಆಗಿ ಅಂತಿಮವಾಗಿ ಅಂಗೀಕಾರವಾದಲ್ಲಿ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರೌಢ ಶಾಲಾ ವಿಭಾಗದ ಉಪ ಪ್ರಾಂಶುಪಾಲರ ಹುದ್ದೆ ಕಾರಣಾಂತರ ತೆರವಾದಾಗ ದೈಹಿಕ ಶಿಕ್ಷಕರಿಗೂ ಕೂಡ ಆಡಳಿತಾತ್ಮಕ ದೃಷ್ಟಿಯಿಂದ ಕರ್ನಾಟಕ ನಾಗರೀಕ ಸೇವಾ ನಿಯಮ 68ರ ಅಡಿಯಲ್ಲಿ ನಿಯಮಾನುಸಾರ ಪ್ರಭಾರ ವ್ಯವಸ್ಥೆ ಮಾಡಬಹುದಾಗಿರುತ್ತದೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪ್ರಸ್ತುತ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಮುಖ್ಯ ಶಿಕ್ಷಕರ/ಉಪ ಪ್ರಾಂಶುಪಾಲರ ವೃಂದದ ಹುದ್ದೆಗಳಿಗೆ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್ -1 ಇವರಿಗೆ ಪ್ರಭಾರ ವಹಿಸಬಾರದಾಗಿ ತಿಳಿಸಿದೆ. ಹಾಗೂ ಈಗಾಗಲೇ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಇವರಿಗೆ ಪ್ರಭಾರ ವಹಿಸಲಾಗಿದ್ದು, ಬಿಡುಗಡೆ ಮಾಡಿದ್ದಲ್ಲಿ ಅಂತವರಿಗೆ ಪುನ: ಮುಖ್ಯ ಶಿಕ್ಷಕರ/ಉಪ ಪ್ರಾಂಶುಪಾಲರ ಪ್ರಭಾರ ವಹಿಸಿಕೊಡಬಾರದಾಗಿ ತಿಳಿಸಿದೆ. ಪ್ರಸ್ತುತ ವೈದ್ಯನಾಥನ್ ಸಮಿತಿಯ ಶಿಫಾರಸ್ಸಿನಂತೆ ಮುಖ್ಯ ಶಿಕ್ಷಕರಿಗೆ ಬಡ್ತಿ ನೀಡುವ ಬಗ್ಗೆ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ ಆಗಬೇಕಾಗಿರುವ ಹಿನ್ನೆಲೆಯಲ್ಲಿ ಈಗ ಪ್ರಭಾರ ವಹಿಸಿಕೊಂಡು ಖಾಲಿ ಕಾರ್ಯನಿರ್ವಹಿಸುತ್ತಿರುವ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್ -1 ಇವರನ್ನು ಅದೇ ಪ್ರಭಾರ ಹುದ್ದೆಯಲ್ಲಿ ತಾತ್ಕಾಲಿಕವಾಗಿ ಮುಂದುವರೆಸಲು ಅನುಮತಿ ನೀಡಿದೆ.

(ತುಷಾರ್ ಗಿರಿ ನಾಥ್)
ಆಯುಕ್ತರು

ಪ್ರತಿಯನ್ನು:-

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ.
3. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ನಿರ್ದೇಶಕರು
4. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಸಹ ನಿರ್ದೇಶಕರು ಹಾಗೂ ಪದನಿಮಿತ್ತ ಕಾರ್ಯದರ್ಶಿಗಳು
5. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ)
6. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು
7. ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಮತ್ತು ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳ ಉಪ ಪ್ರಾಂಶುಪಾಲರು (ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ)
8. ಕಛೇರಿ ಪ್ರತಿ. F\e-data\C1[4]\VP Job Chai.doc

kpeta.weebly.com

Scanned by CamScanner